146ನೇ ಅಧಿವೇಶನ
ನಿ-72
ಕ್ರ-201

# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಟಿ. ಶ್ರೀಕಂಠೇಗೌಡ ಇವರು ನಿಯಮ-72 ರ ಮೇರೆಗೆ ಮಂಡಿಸಿರುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಉತ್ತರ.**

**ವಿಷಯ:** ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಬಿದರಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡಿ.ಹೊಸಹಳ್ಳಿ ಗ್ರಾಮದಲ್ಲಿ ಕೇಸ್.ನಂ:LAQ/251/73-74,Date 28-03-74 ಮತ್ತು ಇತರೆ ಸರ್ಕಾರಿ ಆದೇಶದ ಪ್ರಕಾರ ಸರ್ಕಾರದಿಂದ ಸೈಟುಗಳನ್ನು ಹಂಚಲಾಗಿದ್ದು, ಸದರಿ ಸೈಟು ಗಳಲ್ಲಿ ಸರ್ಕಾರದ ವಿವಿಧ ಉದ್ದೇಶಕ್ಕಾಗಿ ಮೀಸಲಿರಿಸಲಾದ ಸೈಟುಗಳನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿ ಕೊಂಡಿರುವುದರಿಂದ ಸೈಟುಗಳನ್ನು ತೆರವುಗೊಳಿಸುವ ಬಗ್ಗೆ ಹಾಗೂ ಸದರಿ ಆದೇಶಗಳ ಪ್ರಕಾರ ಹಂಚಲಾದ ಸೈಟ್‌ಗಳು ಮತ್ತು ರಸ್ತೆಗಳ ಗುರುತುಗಳು ನಾಶವಾಗಿರುವುದರಿಂದ ಸೈಟ್‌ಗಳು ಮತ್ತು ರಸ್ತೆಗಳನ್ನು ಗುರುತಿಸುವ ಬಗ್ಗೆ.

**ಉತ್ತರ:** ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಬಿದರಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡಿ.ಹೊಸಹಳ್ಳಿ ಗ್ರಾಮದ ಕೇಸ್ ನಂ:LAQ/251/73-74, Dated:28-03-74 ವಿಷಯವು ಉಪ ವಿಭಾಗಾಧಿಕಾರಿ, ಮಂಡ್ಯ ಜಿಲ್ಲೆ ಮಂಡ್ಯರವರ ನ್ಯಾಯಾಲಯದ ಪ್ರಕರಣವಾಗಿರುತ್ತದೆ. ಕಂದಾಯ ಇಲಾಖೆ ವತಿಯಿಂದ ಸದರಿ ಗ್ರಾಮದಲ್ಲಿ ಸರ್ವೆ ನಂ. 79, 80 ರಲ್ಲಿ ಒಟ್ಟು 42 ನಿವೇಶನಗಳನ್ನು ರಚಿಸಿದ್ದು, ಮೊದಲನೆ ಹಂತದಲ್ಲಿ ಕ್ರಮ ಸಂಖ್ಯೆ: 1 ರಿಂದ 21 ನಿವೇಶನಗಳು ಹಂಚಿಕೆಯಾಗಿದ್ದು, ಉಳಿದ 21 ನಿವೇಶನಗಳ ಪೈಕಿ ಕ್ರಮ ಸಂಖ್ಯೆ: 22, 23, 24 ಮತ್ತು 25 ರ ನಿವೇಶನಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ವಿತರಿಸಿದ್ದು ಸಹಿ ಮಾಡಿರುತ್ತಾರೆ. ರಚಿಸಿದ 42 ನಿವೇಶನದ ಪೈಕಿ ಸರ್ಕಾರದ ವಿವಿಧ ಉದ್ದೇಶಕ್ಕೆ ಮೀಸಲಿರಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ಡಿ.ಹೊಸಹಳ್ಳಿ ಗ್ರಾಮಸ್ಥರು ದಿನಾಂಕ:12.02.2021 ರಂದು ಒತ್ತುವರಿಯಾಗಿರುವ ಸರ್ಕಾರಿ ಸೈಟುಗಳನ್ನು ತೆರವುಗೊಳಿಸುವಂತೆ ತಹಶೀಲ್ದಾರ್ ಮದ್ದೂರು ತಾಲ್ಲೂಕು, ಮದ್ದೂರು ರವರಿಗೆ ಮನವಿ ಸಲ್ಲಿಸಿರುತ್ತಾರೆ.

ತಹಶೀಲ್ದಾರ್, ಮದ್ದೂರು ತಾಲ್ಲೂಕು, ಮದ್ದೂರು ರವರಿಗೆ ದಿನಾಂಕ;8.7.2021 ರಂದು ಗ್ರಾಮ ಪಂಚಾಯಿತಿ ಬಿದರಕೋಟೆ ಕಾರ್ಯಾಲಯದಿಂದ ರಸ್ತೆ ಗುರುತಿಸಿ ಕೊಡುವಂತೆ ಪತ್ರ ಬರೆಯಲಾಗಿದೆ. ಈಗಾಗಲೇ ಗ್ರಾಮಸ್ಥರ ಮನವಿಯಂತೆ ತಹಶೀಲ್ದಾರ್, ಮದ್ದೂರು ತಾಲ್ಲೂಕು, ಮದ್ದೂರು ರವರಿಗೆ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯಿತಿಯಿಂದ ಪತ್ರ ಬರೆಯಲಾಗಿದ್ದು, ಕಂದಾಯ ಇಲಾಖೆಯ ಸಹಯೋಗದೊಂದಿಗೆ ಗ್ರಾಮ ಪಂಚಾಯಿತಿ ಮೂಲಕ ಸೈಟ್‌ಗಳು ಮತ್ತು ರಸ್ತೆಗಳನ್ನು ಗುರುತಿಸುವ ಕುರಿತು ತುರ್ತಾಗಿ ಕ್ರಮ ವಹಿಸಲಾಗುವುದು.

ಸಂಖ್ಯೆ: ಗ್ರಾಅಪ 179 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.